ಕರೆಗಳ ಹುಡುಕಾಟವೇ ಕಾವ್ಯ ಪಯಣ. ಒಮ್ಮೊಮ್ಮೆ ಈ ಕರೆ ಮೌನದಲ್ಲೂ ಅಡಗಿರುತ್ತದೆ. ಒಮ್ಮೊಮ್ಮೆ ಈ ಕರೆ ಶಾಪವನ್ನೂ ಕೊಡುತ್ತದೆ. ಕವಿತೆಯೆಂದರೆ ಕರೆ, ಮೌನ ಮತ್ತು ದುಷ್ಟಶಕ್ತಿಗಳಿಗೆ ಕೊಡುವ ಶಾಪ. ನೋಡಿ ಸಾವಿರಾರು ವರ್ಷಗಳಿಂದ ಕವಿತೆ ಏನೆಲ್ಲಾ ಆಗಿ ಒದಗಿಬಂದಿದೆ. ವಜ್ರಕ್ಕೆ ರೂಪ ದಕ್ಕುವುದು ಯಾವಾಗ? ಅದಕ್ಕೆ ಸಾಣೆ ಹಿಡಿದಾಗಲೇ. ಅದನ್ನು ಹಲವು ಮಗ್ಗಲುಗಳಿಂದ ಕಟೆದಾಗ ಮಾತ್ರ. ಕವಿತೆಯೂ ಹಾಗೆಯೇ. ಯಾರಾದರೂ ಕವಿತೆಯನ್ನು ಕಟಕಟೆಯಲ್ಲಿ ನಿಲ್ಲುಸುತ್ತಿದ್ದಾರೆಂದರೆ ಇದರರ್ಥ ಅದರ ಹೊಳಪಿಗೆ ನೆರವಾಗುತ್ತಿದ್ದಾರೆ ಅಂತ.

ಕವಿತೆ ಜನರ ಸ್ಮೃತಿಗಳಿಂದ ರಚನೆಗೊಳ್ಳುತ್ತದೆ. ಯಾವ್ಯಾವುದೋ ಸ್ಮೃತಿಗಳು ನನ್ನೊಳಗೆ ಬೆಳೆಯತೊಡಗುತ್ತವೆ. ಹಿಂದಿನ ಕವಿಗಳು ತುಂಬಾ ತಿರುಗುತ್ತಿದ್ದರು. ಈ ತಿರುಗಾಟ ಕೂಡ ಕವಿಗಳಿಗೆ ಒಂದು ಶಕ್ತಿ. ನಾನು ಕೂಡ ತಿರುಗಾಟ ಪ್ರಿಯ. ನಮ್ಮ ಮನಸ್ಸಿನಲ್ಲಿ ಜಾತಿ, ಧರ್ಮ, ವಿದ್ಯೆ, ಹಣ, ಅಧಿಕಾರ, ಅಂತಸ್ತು ಯಾವುದೇ ರೀತಿಯ ಅಹಂಕಾರವಿದ್ದರೂ ಅಲ್ಲಿಗೆ ನಮ್ಮ ಮತ್ತು ಕವಿತೆಯ ನಾಶವಾದಂತೆಯೇ ಸರಿ. ಈ ಅಹಂಕಾರವುಳ್ಳವರನ್ನು ಗಮನಿಸಿ, ಅವರು ಹಿಂಸೆ ದಬ್ಬಾಳಿಕೆಯನ್ನಲ್ಲದೆ ಬೇರೇನೂ ಮಾಡುವುದಿಲ್ಲ.

**◆ 'ನನ್ನ ಕವಿತೆ ಎಲ್ಲಿ ಕೂಡಬೇಕೆಂದರೆ ಯಾರು ಚಪ್ಪಲಿಯನ್ನು ಬಿಡುತ್ತಾರೊ ಆ ಜಾಗದಲ್ಲಿ. ನಾನು ಮತ್ತು ನನ್ನ ಕವಿತೆ ಸದಾ ಇಂಥ ಸ್ಥಳಕ್ಕಾಗಿಯೇ ಹುಡುಕಾಡಿದೆವು. ಯಾರು ಯಾವುದನ್ನು ಪವಿತ್ರ ಮತ್ತು ಪೂಜ್ಯವೆಂದು ಭಾವಿಸುವುದಿಲ್ಲವೊ ಅಂಥ ವಸ್ತು, ಜನ ಮತ್ತು ಜಗತ್ತಿನ ಜೊತೆ ಇರಲು ಬಯಸಿದೆವು' ಅಂತ ನೀವು ಬರೆದುಕೊಂಡಿರುವಿರಿ. ಯಾಕೆ ಇಂಥ ನಂಬಿಕೆಯೊಂದು ನಿಮ್ಮಲ್ಲಿ ಚಿಗುರಿತು.**

> ಪ್ರತಿಯೊಂದು ಕವಿತೆ ಕೂಡ ಆರ್ತನಾದ. ಒಳಗಿನ ದುಃಖ. ಅದು ಎಲ್ಲರ ದುಃಖ ಕೂಡ. ಮನುಷ್ಯನೊಳಗಿನ ಆಳವಾದ ದುಃಖಗಳು ಕಾವ್ಯದಲ್ಲಿ ಪ್ರಕಟಗೊಂಡಾಗ ಅವು ಎಲ್ಲರ ದುಃಖಗಳಾಗಿ ಕಾಣುತ್ತವೆ.

